# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ) ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು – 560 002

ಜಂಟಿ ನಿರ್ದೇಶಕರು (ನಗರ ಯೋಜನೆ–ಉತ್ತರ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಂ. 88/03/19-20 ದಿನಾಂಕ. 10/4/19 ಬೆಂಗಳೂರು

ಸಂಖ್ಯೆ: BBMP/Add.Dir/JD North/LP/0016/2018-19 ದಿನಾಂಕ: 10-04-2019.

## ಪ್ರಾರಂಭಿಕ ಪ್ರಮಾಣಪತ್ರ

ವಿಷಯ: ಆಸ್ತಿ ಖಾತಾ ಸಂಖ್ಯೆ. 6/1/1, ವಾರ್ಡ್ ನಂ. 05, ಸರ್ವೆ ನಂ. 45(ಪಿ), ಚೊಕ್ಕನಹಳ್ಳಿ ಗ್ರಾಮ, ಬ್ಯಾಟರಾಯನಪುರ ಉಪವಿಭಾಗ, ಯಲಹಂಕ ವಲಯ, ಬೆಂಗಳೂರು ಇಲ್ಲಿ ನಿರ್ಮಿಸುತ್ತಿರುವ ಶೈಕ್ಷಣಿಕ (ಶಾಲೆ) ಉಪಯೋಗದ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡುವ ಬಗ್ಗೆ.

ಉಲ್ಲೇಖ: 1) ಪ್ರಾರಂಭಿಕ ಪ್ರಮಾಣಪತ್ರ ಕೋರಲಾದ ತಮ್ಮ ಮನವಿ ಪತ್ರ ದಿನಾಂಕ: 11-03-2019.
2) ನಕ್ಷೆ ಮಂಜೂರಾತಿ ಸಂಖ್ಯೆ: BBMP/Addl.Dir/JD North/LP/0016/2018-19 ದಿನಾಂಕ: 19-02-2019.

* * * * * * *

ಆಸ್ತಿ ಖಾತಾ ಸಂಖ್ಯೆ. 6/1/1, ವಾರ್ಡ್ ನಂ. 05, ಸರ್ವೆ ನಂ. 45(ಪಿ), ಚೊಕ್ಕನಹಳ್ಳಿ ಗ್ರಾಮ, ಬ್ಯಾಟರಾಯನಪುರ ಉಪವಿಭಾಗ, ಯಲಹಂಕ ವಲಯ, ಬೆಂಗಳೂರು ಇಲ್ಲಿನ ಸ್ವತ್ತಿನಲ್ಲಿ ನಿರ್ಮಿಸುತ್ತಿರುವ ತಳ+ನೆಲ+ಮೇಲಿನ 6 ಅಂತಸ್ತುಗಳ ಶೈಕ್ಷಣಿಕ (ಶಾಲೆ) ಉಪಯೋಗದ ಕಟ್ಟಡ ನಿರ್ಮಾಣಕ್ಕೆ ಉಲ್ಲೇಖ (2) ರಂತೆ ಈ ಕಛೇರಿಯಿಂದ ದಿನಾಂಕ: 19-02-2019 ರಂದು ನಕ್ಷೆ ಮಂಜೂರಾತಿಯನ್ನು ನೀಡಲಾಗಿರುತ್ತದೆ. ಸದರಿ ಶೈಕ್ಷಣಿಕ (ಶಾಲೆ) ಕಟ್ಟಡ ನಿರ್ಮಾಣಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡಲು ಉಲ್ಲೇಖ (1) ರಲ್ಲಿ ಕೋರಿರುವುದಕ್ಕೆ ಸಂಬಂಧಿಸಿದಂತೆ ಕಟ್ಟಡ ನಿರ್ಮಾಣದ ಸ್ಥಳವನ್ನು ಪರಿಶೀಲಿಸಲಾಗಿ, ಮಂಜೂರಾತಿ ನಕ್ಷೆಯಂತೆ ಅಗತ್ಯ ನಡುಜಾಗಗಳನ್ನು ಬಿಟ್ಟು ಆರ್.ಸಿ.ಸಿ. ಸ್ಥಂಭಗಳನ್ನು ನಿರ್ಮಿಸುತ್ತಿರುವುದನ್ನು ಗಮನಿಸಲಾಗಿರುತ್ತದೆ.

ಅಪರ ನಿರ್ದೇಶಕರು (ನಗರ ಯೋಜನೆ) ರವರು ಪ್ರಾರಂಭಿಕ ಪ್ರಮಾಣಪತ್ರ ನೀಡುವ ಪ್ರಸ್ತಾವನೆಗೆ ದಿನಾಂಕ: 30-03-2019 ರಂದು ಅನುಮೋದನೆ ನೀಡಿರುತ್ತಾರೆ. ಸದರಿ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ಶುಲ್ಕ ರೂ. 1,11,000/- ಗಳಿಗೆ ಡಿ.ಡಿಯನ್ನು ಸಲ್ಲಿಸಿದ್ದು, ಈ ಕಛೇರಿಯ ರಶೀದಿ ಸಂಖ್ಯೆ: RE-ifms 331-TP/000016 ದಿನಾಂಕ: 10-04-2019 ರಲ್ಲಿ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಸಂದಾಯ ಮಾಡಿಕೊಳ್ಳಲಾಗಿದೆ. ಆದುದರಿಂದ ಉಲ್ಲೇಖ (2) ರಲ್ಲಿ ನಕ್ಷೆ ಮಂಜೂರಾತಿ ನೀಡಲಾದ ಶೈಕ್ಷಣಿಕ (ಶಾಲಾ) ಉಪಯೋಗದ ಕಟ್ಟಡ ನಿರ್ಮಾಣಕ್ಕೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಪ್ರಾರಂಭಿಕ ಪ್ರಮಾಣಪತ್ರವನ್ನು ನೀಡಲಾಗಿದೆ.

ಷರತ್ತುಗಳು

1. ಕಟ್ಟಡದ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2. ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ, ಅಪಘಾತ ಆಗದಂತೆ ಕಟ್ಟಡ ನಿರ್ಮಾಣ ಕೈಗೊಳ್ಳುವುದು ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.

3. ಮಂಜೂರಾತಿಯ ಸಿಂಧುತ್ವವು ಉಲ್ಲೇಖ (1) ರಂತೆ ಅನುಮೋದನೆ ನೀಡಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ಮಾನ್ಯತೆ ಹೊಂದಿದ್ದು, ಈ ಅವಧಿಯೊಳಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿ ಸ್ವಾಧೀನಾನುಭವ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.

4. ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಇಂಜಿನಿಯರಿಂಗ್ ಉಪ-ವಿಭಾಗಕ್ಕೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.

5. ವಿವಿಧ ಇಲಾಖೆಗಳಿಂದ ನೀಡಿರುವ ನಿರಾಪೇಕ್ಷಣಾ ಪತ್ರಗಳಲ್ಲಿ ವಿಧಿಸಿರುವ ಷರತ್ತನ್ನು ಪಾಲಿಸತಕ್ಕದ್ದು.

ಸಹಿ /-
ಜಂಟಿ ನಿರ್ದೇಶಕರು (ನಗರ ಯೋಜನೆ –ಉತ್ತರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗೆ,

ಮೆ॥ ಭಾರತೀಯ ಸಿಟಿ ಡೆವಲಪರ್ಸ್ ಪ್ರೈ.ಲಿ.,
ನಂ.1/5, ಪ್ಯಾಲೇಸ್ ರಸ್ತೆ,
ಬೆಂಗಳೂರು – 560001.

ಪ್ರತಿಯನ್ನು:

1. ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ ವಿಭಾಗ) / ಸಹಾಯಕ ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ ಉಪ-ವಿಭಾಗ) ರವರಿಗೆ ಮಾಹಿತಿಗಾಗಿ.
2. ಕಛೇರಿ ಪ್ರತಿ.

B.R. Muddu R. 10/4/19
ಜಂಟಿ ನಿರ್ದೇಶಕರು (ನಗರ ಯೋಜನೆ –ಉತ್ತರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

10/4/2019 10/4/19 10/4/19